


‘ಚಾಂಗಿ 5’ ನೌಕೆಯ ವಿಹಂಗಮ ನೋಟ. ಚಿತ್ರ ಕೃಪೆ: ಚೀನಾದ ಅಂತರಿಕ್ಷ ಸಂಸ್ಥೆ ಸಿ.ಎನ್.ಎಸ್.ಎ.

ಭೂಮಿಯ ‘ತೊಗಟೆ’ ಚಿಪ್ಪೆದ್ದು ಪುಡಿಪುಡಿಯಾಗಿ ಅಪ್ಪಳಿಸಿದ ಆಕಾಶಕಾಯವೂ ನಾಶವಾಯಿತಂತೆ. ಇದರಿಂದ ಜನಿತವಾದ ‘ಧೂಳು’ ಕೆಲಕಾಲ ಭೂಮಿಯನ್ನು ಸುತ್ತಿ ಬೇಗನೆ ಒಟ್ಟುಗೂಡುವ ಮೂಲಕ ಚಂದ್ರನ ಹುಟ್ಟಿಗೆ ಕಾರಣ ಆಯಿತಂತೆ.

1976ರಲ್ಲಿ ರಷ್ಯಾದ ‘ಲೂನಿಕ್ 24’ ರೋಬಾಟ್ ನೌಕೆ ಚಂದ್ರನ ಮೇಲಿನ ಕಲ್ಲುಮಣ್ಣುಗಳನ್ನು ಭೂಮಿಗೆ ತಂದ ನಂತರ ಸುಮಾರು 14 ವರ್ಷ ಚಂದ್ರ ಮರೆತೇಹೋಗಿದ್ದನೆನ್ನಬಹುದು. ಅಷ್ಟು ಹೊತ್ತಿಗೆ ಯೂರೋಪ್, ಜಪಾನ್, ಚೀನಾ ಮತ್ತು ಭಾರತ ಅಂತರಿಕ್ಷ ಕ್ಷೇತ್ರವನ್ನು ಪ್ರವೇಶಿಸಿ ಅನೇಕ ಸಾಧನೆಗಳನ್ನು ಮಾಡಿದ್ದವು. ಈ ನಿಟ್ಟಿನಲ್ಲಿ ಜಪಾನ್ ತನ್ನ ಮೊದಲ ಚಂದ್ರ ಅನ್ವೇಷಣಾ ನೌಕೆಯನ್ನು 1990ರಲ್ಲಿ ಉಡಾಯಿಸಿತು.

### ಭಾರತದ ಸಾಧನೆ

ಆ ಬಳಿಕ ಅಮೆರಿಕದ ಒಂದು ಪುಟ್ಟ ರೋಬಾಟ್ ನೌಕೆ ಚಂದ್ರನ ಧ್ರುವ ಪ್ರದೇಶಗಳ ಮೇಲೆ ಹಾದುಹೋದಾಗ ಅಲ್ಲಿ ಅದಕ್ಕೆ ಮಂಜು ಕಂಡಂತೆ ಆಯಿತು. ಅಲ್ಲಿಂದ ಚಂದ್ರನ ಅನ್ವೇಷಣೆಗೆ ಹೊಸ ಹುರುಪು ಬಂದಂತಾಯಿತು. ಹೊಸ ಸಹಸ್ರಮಾನದಲ್ಲಿ ಮೊದಲಿಗೆ 2003ರಲ್ಲಿ ಯೂರೋಪ್, ನಂತರ 2007ರಲ್ಲಿ ಜಪಾನ್ ಮತ್ತು ಚೀನಾ, ಆ ಬಳಿಕ 2008ರಲ್ಲಿ ಭಾರತ ಚಂದ್ರನತ್ತ ರೋಬಾಟ್ ನೌಕೆಗಳನ್ನು ಉಡಾಯಿಸಿದವು. ಆ ಪೈಕಿ ಭಾರತದ ‘ಚಂದ್ರಯಾನ1’ ನೌಕೆ ಚಂದ್ರನ ಮೇಲೆ ನೀರನ್ನು ಖಚಿತವಾಗಿ ಗುರುತಿಸುವ ಮೂಲಕ ಜಗತ್ತಿನಾದ್ಯಂತ ಖ್ಯಾತಿಯನ್ನು ಪಡೆಯಿತು.

ಇದಾದ ಬಳಿಕವೂ ಭಾರತ, ಅಮೆರಿಕ, ಜಪಾನ್,



## ಚಂದ್ರನೆಂಬ ಉಪಕಾರಿ ಉಪಗ್ರಹ

ಚಂದ್ರನೆಂಬ ಭೂಮಿಯ ಸಮೀಪದ ಸಂಗಾತಿ ಅನೇಕ ದೃಷ್ಟಿಗಳಿಂದ ಭೂಮಿಗೆ ಹಾಗೂ ಭೂವಾಸಿಗಳಿಗೆ ಅತ್ಯಂತ ಉಪಕಾರಿಯಾಗಿ ಪರಿಣಮಿಸಿದೆ ಎಂದು ವಿಜ್ಞಾನಿಗಳು ನುಡಿಯುತ್ತಾರೆ. ಆ ಪೈಕಿ ಕೆಲವರು, ಹುಟ್ಟಿದ ಮೊದಲ ‘ದಿನ’ಗಳಲ್ಲಿ ಚಂದ್ರ ಉಂಟುಮಾಡುತ್ತಿದ್ದ ಬೃಹತ್ ಉಬ್ಬರವಿಳಿತಗಳು (ಟೈಡ್ಸ್) ಸಮುದ್ರದ ನೀರನ್ನು ಚೆನ್ನಾಗಿ ಕಲಕಿ, ಅಲ್ಲಿದ್ದ ರಾಸಾಯನಿಕ ವಸ್ತುಗಳು ಒಂದರರೊಡನೊಂದು ಪ್ರಕ್ರಿಯಿಸುವುದನ್ನು ಸಾಧ್ಯಮಾಡಿ ಜೀವದ ಉಗಮಕ್ಕೆ ಕಾರಣವಾದವು ಎಂದು ಹೇಳುತ್ತಾರೆ.

ಭೂಮಿಯು ವೇಗವಾಗಿ ತನ್ನ ಅಕ್ಷದ ಸುತ್ತ ಸುತ್ತುವುದಕ್ಕೆ ನಿರಂತರವಾಗಿ ಕಡಿವಾಣ ಹಾಕಿದ ಚಂದ್ರ, ಭೂಮಿಯ ಹವಾಮಾನವನ್ನು ಸುಧಾರಿಸಿ ಜೀವಿಗಳ ವಿಕಾಸಕ್ಕೆ ನೆರವಾಯಿತಂತೆ.

ಇದರೊಂದಿಗೇ ಭೂಮಿಯ ಅಕ್ಷದ ವಾಲುವಿಕೆಗೆ ಸ್ಥಿರತೆ ನೀಡಿರುವ ಚಂದ್ರ ಆ ಮೂಲಕ ಋತುಗಳ ಸ್ಥಿರತೆಯನ್ನು ಸಾಧ್ಯಮಾಡಿ ಜೀವಿಗಳ ಸುರಕ್ಷತೆಗೂ ನೆರವಾಗಿದೆ ಎಂಬುದು ಅವರ ಅನಿಸಿಕೆ.

ಕೋಟ್ಯಂತರ ವರ್ಷಗಳ ಹಿಂದೆ ಭೂಮಿಯತ್ತ ಸಾಗಿ ಬಂದ ‘ಕ್ಷುದ್ರಗ್ರಹ (ಆಸ್ಟರಾಯ್ಡ್), ಧೂಮಕೇತು (ಕಾಮೆಟ್) ಹಾಗೂ ಅವುಗಳ ತುಂಡುಗಳಿಗೆ ‘ಎದೆ’ಯೊಡ್ಡುವ ಮೂಲಕ ಭೂಮಿಯನ್ನು ಚಂದ್ರ ರಕ್ಷಿಸಿದೆ ಎಂದು ವಿಜ್ಞಾನಿಗಳು ನಂಬಿದ್ದಾರೆ.

ಹೀಗಾಗಿ ಚಂದ್ರನಿರದಿದ್ದರೆ ಭೂಮಿಯ ಭವಿಷ್ಯವೇ ಬೇರೆ ಬಗೆಯದಾಗಿರುತ್ತಿತ್ತು ಎಂಬುದು ಅವರ ಅಂಬೋಣ.

